# ಪ್ರಕಟಣೆ

2020-21ನೇ ಸಾಲಿನ ಬಿ.ಇಡಿ ಕೋರ್ಸಿನ ವ್ಯಾಸಂಗಕ್ಕಾಗಿ ಸರ್ಕಾರಿ ಕೋಟಾದಡಿ ಲಭ್ಯವಿರುವ ಸೀಟುಗಳ ದಾಖಲಾತಿಗೆ ಸಂಬಂಧಿಸಿದಂತೆ ಎರಡನೇ ಸುತ್ತಿನ ಸೀಟು ಹಂಚಿಕೆ ಪಟ್ಟಿಯನ್ನು ದಿ: 29-03-2021 ರಂದು ವೆಬ್ ಸೈಟ್ ನಲ್ಲಿ ಪ್ರಕಟಿಸಿ, ಅಭ್ಯರ್ಥಿಗಳ ದಾಖಲಾತಿಗಾಗಿ ದಿನಾಂಕ: 05-04-2021 ರವರೆಗೆ ಕಾಲಾವಕಾಶ ನೀಡಲಾಗಿತ್ತು.

ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ದಾಖಲಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅಭ್ಯರ್ಥಿಗಳು ದಾಖಲಾದ ಬಗ್ಗೆ ವಿವರಗಳನ್ನು ನೋಡಲ್ ಕೇಂದ್ರಗಳು ಹಾಗೂ ಬಿ.ಇಡಿ ಕಾಲೇಜುಗಳಿಂದ ಸಲ್ಲಿಕೆಯಾದ ಮಾಹಿತಿಗಳನ್ನಾಧರಿಸಿ ವಿಜ್ಞಾನ ವಿಭಾಗಕ್ಕೆ ಮಾತ್ರ ಲಭ್ಯವಿರುವ ಸೀಟುಗಳಿಗೆ [Institution wise remaining seats (category wise)] Seat Matrix ಅನ್ನು ದಿನಾಂಕ: 07-04-2021 ರಂದು ಪ್ರಕಟಿಸಲಾಗಿದೆ. Seat Matrix ಅನ್ನು ಗಮನಿಸಿ ಅಭ್ಯರ್ಥಿಗಳು ದಾಖಲಾತಿ ಬಯಸುವ ಕಾಲೇಜುಗಳಿಗೆ ಆಯ್ಕೆಗಳನ್ನು (Option Entry) ದಾಖಲಿಸಲು ದಿನಾಂಕ: 09-04-2021ರ ಸಂಜೆ 5.00 ಗಂಟೆಯವರೆಗೆ ಅವಕಾಶ ಕಲ್ಪಿಸಲಾಗಿದೆ. ವಿಜ್ಞಾನ ವಿಭಾಗದ ಅಭ್ಯರ್ಥಿಗಳಿಗೆ ಮೂರನೇ ಸುತ್ತಿನ ಮೊದಲ ಹಂತದ ಸೀಟು ಹಂಚಿಕೆ ಪಟ್ಟಿಯನ್ನು ದಿನಾಂಕ: 10-04-2021 ರಂದು ಪ್ರಕಟಿಸಲಾಗುವುದು. ಈ ಅಭ್ಯರ್ಥಿಗಳು ಕಾಲೇಜಿಗೆ ದಾಖಲಾಗಲು ಕೊನೆಯ ದಿನಾಂಕ: 16-04-2021 ಆಗಿರುತ್ತದೆ.

**ಕಲಾ ವಿಭಾಗದ ಅಭ್ಯರ್ಥಿಗಳಿಗೆ ಸೂಚನೆ:**

ದಿನಾಂಕ: 16-04-2021ರಂದು ವಿಜ್ಞಾನ ವಿಭಾಗದ ದಾಖಲಾತಿ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ವಿಜ್ಞಾನ ವಿಭಾಗದಲ್ಲಿ ಉಳಿಕೆಯಾದ ಸೀಟುಗಳನ್ನು ಸಹ ಕಲಾ ವಿಭಾಗದ ಸೀಟುಗಳೆಂದು ಪರಿಗಣಿಸಿ ದಿನಾಂಕ: 17-04-2021ರಂದು [Institution wise remaining seats (category wise)] Seat Matrix ಅನ್ನು ಪ್ರಕಟಿಸಲಾಗುವುದು. ಕಲಾ ವಿಭಾಗದ ಅಭ್ಯರ್ಥಿಗಳಿಗೆ ದಿನಾಂಕ: 17-04-2021 ಹಾಗೂ 18-04-2021ರಂದು ದಾಖಲಾತಿ ಬಯಸುವ ಕಾಲೇಜುಗಳಿಗೆ ಆದ್ಯತೆ ನಮೂದಿಸಲು ಅವಕಾಶ ಕಲ್ಪಿಸಲಾಗುವುದು. ಅಭ್ಯರ್ಥಿಗಳು ದಾಖಲಿಸಿದ ಆದ್ಯತೆಯನ್ನು ಪರಿಗಣಿಸಿ ಮೂರನೇ ಸುತ್ತಿನ ಎರಡನೇ ಹಂತದ ದಾಖಲಾತಿಗಾಗಿ ಸೀಟು ಹಂಚಿಕೆ ಪಟ್ಟಿಯನ್ನು ದಿನಾಂಕ: 19-04-2021ರಂದು ಪ್ರಕಟಿಸಲಾಗುವುದು.

**ಸೂಚನೆ:**

ಅಭ್ಯರ್ಥಿಗಳು Option Entry ಯಲ್ಲಿ ನೀಡಿರುವ ಕಾಲೇಜುಗಳಲ್ಲಿ ಸೀಟು ಲಭ್ಯವಿದ್ದಲ್ಲಿ ಮಾತ್ರ ಸೀಟು ಹಂಚಿಕೆ ಮಾಡಲಾಗುವುದು. ಒಂದು ವೇಳೆ ಅಭ್ಯರ್ಥಿಗಳು ಆದ್ಯತೆ ನೀಡಿರುವ ಕಾಲೇಜುಗಳನ್ನು ನಿಯಮಾನುಸಾರ ಸೀಟು ಲಭ್ಯವಿಲ್ಲದಿದ್ದಲ್ಲಿ ಇನ್ಯಾವುದೇ ಕಾಲೇಜನ್ನು ಹಂಚಿಕೆ ಮಾಡಲಾಗುವುದಿಲ್ಲ.

Sd/-

ವಿಶೇಷಾಧಿಕಾರಿ

ಕೇಂದ್ರೀಕೃತ ದಾಖಲಾತಿ ಘಟಕ